ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಬಾಗೇಪಲ್ಲಿ ಕ್ಷೇತ್ರದಿಂದ ಅನುದಾನದ ಬಿಡುಗಡೆಗಾಗಿ ಯಾವ ಪ್ರಸ್ತಾವನೆಯು ಬಂದಿರುವುದಿಲ್ಲ ಪ್ರಸ್ತಾವನೆಗಳು ಬಂದಿದ್ದಲ್ಲಿ, ಹಣದ ಲಭ್ಯತೆ ಆಧಾರದ ಮೇಲೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

1544 (2065) ಶ್ರೀ ಶ್ರೀರಾಮರೆಡ್ಡಿ (ಬಾಗೇಪಲ್ಲಿ) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ ಅನುಮತಿ ಪಡೆದ ಗಣಿಗಾರಿಕೆಗಳ ಸಂಖ್ಯೆ ಎಷ್ಟು,

ಆ) ಜಿಲ್ಲೆಯಲ್ಲಿ ಹೊಸ ಗಣಿಗಾರಿಕೆಗಳಿಗೆ ಅನುಮತಿ ನೀಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ,

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು)

ಅ) ಕೋಲಾರ ಜಿಲ್ಲೆಯಲ್ಲಿ ಅನುಮತಿ ಪಡೆದ ಗಣಿಗಾರಿಕೆಗಳ ತಾಲ್ಲೂಕಾವಾರು ವಿವರಗಳನ್ನು ಕೆಳಗಿನಂತೆ ನೀಡಿದೆ

(ಫೆಬ್ರವರಿ 2007 ಕ್ಕೆ ಇದ್ದಂತೆ)

ಕ್ರ.ಸಂ.	ತಾಲ್ಲೂಕು	ಮುಖ್ಯ ಖನಿಜ	ಗಣಿಗಾರಿಕೆಗಳ ಸಂಖ್ಯೆ		ಒಟ್ಟು
			ಅಲಂಕಾರಿಕ ಶಿಲೆ ಗಣಿ ಗುತ್ತಿಗೆಗಳ ಸಂಖ್ಯೆ	ವಿಶಿಷ್ಟವಲ್ಲದ ಉಪ ಖನಿಜಗಳ ಗಣಿ ಗುತ್ತಿಗೆಗಳ ಸಂಖ್ಯೆ	
1	ಬಾಗೇಪಲ್ಲಿ	–	–	07	07
2	ಬಂಗಾರಪೇಟೆ	01	02	12	15
3	ಚಿಂತಾಮಣಿ	01	04	04	09
4	ಚಿಕ್ಕಬಳ್ಳಾಪುರ	01	–	178	179
5	ಗುಡಿಬಂಡೆ	–	12	11	23
6	ಗೌರಿಬಿದನೂರು	01	02	04	07
7	ಕೋಲಾರ	–	06	142	148
8	ಮಾಲೂರು	–	02	65	67
9	ಮುಳಬಾಗಿಲು	–	04	22	26
10	ಶಿಡ್ಲಘಟ್ಟ	03	02	02	07
11	ಶ್ರೀನಿವಾಸಪುರ	–	02	04	06
	ಒಟ್ಟು	**07**	**36**	**451**	**494**

ಆ) ಹೊಸದಾಗಿ ಕಲ್ಲು ಗಣಿ ಗುತ್ತಿಗೆ ಮಂಜೂರಾತಿ ಕೋರಿ ಅರ್ಜಿಗಳು ಬರುತ್ತಿದ್ದು, ಮಂಜೂರಾತಿಗಾಗಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು

ಇ) ಸರ್ಕಾರದ ಸುತ್ತೋಲೆ ಸಂಖ್ಯೆ RD 83 LGP 2006, ದಿನಾಂಕ 05-01-2007 ರ ಪ್ರಕಾರ ರಾಜ್ಯದಲ್ಲಿನ ಯಾವುದೇ, ಗೋಮಾಳ, ಗಾಯರಾಣ, ಹುಲ್ಲುಬನ್ನಿ, ಜಮೀನುಗಳಲ್ಲಿ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ ಗಣಿ ಗುತ್ತಿಗೆಗೆ ಮಂಜೂರು ಮಾಡಲು ನಿರ್ಬಂಧವಿಧಿಸಲಾಗಿದೆ ಆದ್ದರಿಂದ ಮೇಲಿನ ವರ್ಗೀಕರಣದ ಜಮೀನುಗಳಲ್ಲಿನ ಅರ್ಜಿಗಳನ್ನು ಹೊರತುಪಡಿಸಿ, ಉಳಿದ ಪ್ರದೇಶಗಳಲ್ಲಿ ಕಲ್ಲು ಗಣಿ ಗುತ್ತಿಗೆ ಮಂಜೂರಾತಿಗಾಗಿ ಸ್ವೀಕರಿಸಲಾದ ಅರ್ಜಿಗಳನ್ನು ಸಂಬಂಧಪಟ್ಟ ಇಲಾಖೆಗಳ ಅಭಿಪ್ರಾಯ/ ನಿರಾಕ್ಷೇಪಣ ಪತ್ರ ಪಡೆದ ನಂತರ ಕರ್ನಾಟಕ ಉಪ ಖನಿಜ ರಿಯಾಯತಿ ನಿಯಮಾವಳಿ, 1994 ರ ನಿಯಮಗಳಡಿಯಲ್ಲಿ ಕಲ್ಲು ಗಣಿಗುತ್ತಿಗೆಗಳನ್ನು ಮಂಜೂರು ಮಾಡಲಾಗುತ್ತಿದೆ

1545 (1943) ಡಾ॥ ಸುಧಾಕರ್ ಎಂ ಸಿ (ಚಿಂತಾಮಣಿ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ನಗರದ ಮೂಲಕ ಹಾದು ಹೋಗುತ್ತಿರುವ ಮುಳಬಾಗಲ್-ಮೂಡಿಗೆರೆ ರಾಜ್ಯ ಹೆದ್ದಾರಿಯಲ್ಲಿ ಇತ್ತೀಚೆಗೆ ಅಪಘಾತಗಳು ಹೆಚ್ಚಿಗೆ ಸಂಭವಿಸುತ್ತಿರುವುದು ನಿಜವಲ್ಲವೇ,

ಆ) ಈ ರಸ್ತೆಯ ಅಭಿವೃದ್ಧಿ ಕಾಮಗಾರಿಗಳಿಗೆ ಈಗಾಗಲೇ ಮಂಜೂರಾತಿಯಾಗಿದ್ದರೂ ಕೂಡ ಕಾಮಗಾರಿಗಳನ್ನು ಇದುವರೆವಿಗೂ ಕೈಗೆತ್ತಿಕೊಳ್ಳದಿರಲು ಕಾರಣವೇನು,

ಇ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು

ಆ) ಮೂಡಿಗೆರೆ-ಮುಳಬಾಗಿಲ ರಾಜ್ಯ ಹೆದ್ದಾರಿ-58 ರ ನಿರ್ವಹಣೆಯನ್ನು ಕರ್ನಾಟಕ